**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ.**

**ಸಿಸಿ ಸಂಖ್ಯೆ 2086/2022**

ಪ್ರಾ.ಸಾ–3

| | | |
|---|---|---|
| ಹೆಸರು | : | ಕೋಟೇಗೌಡ |
| ತಂದೆಯ ಹೆಸರು | : | ನರಸಿಂಹೇಗೌಡ |
| ವಯಸ್ಸು | : | 61 |
| ವೃತ್ತಿ | : | ನಿವೃತ್ತ ಪೊಲೀಸ್ ಉಪ ನಿರೀಕ್ಷಕರು, |
| ವಾಸ | : | ನಂಜನಗೂಡು |

**ದಿನಾಂಕ 13.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ದಂಡ ಪ್ರಕ್ರಿಯೆ ಸಂಹಿತೆ ಕಲಂ 299 ರ ಅಡಿಯಲ್ಲಿ ಸಾಕ್ಷಿಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

2021 ರಿಂದ ಅಕ್ಟೋಬರ್ 2023 ರವರೆಗೆ ನಾನು ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಸಹಾಯಕ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದ ಆರೋಪಿತನ ವಿರುದ್ಧ ಉದ್ಘೋಷಣೆ ಮಾಡಲು ನ್ಯಾಯಾಲಯದಿಂದ ವಾರೆಂಟ್ ಬಂದಿದ್ದು, ಆ ಪ್ರಕಾರ ದಿನಾಂಕ 02.03.2023 ರಂದು ಮೈಸೂರು ನಗರ ಉದಯಗಿರಿ ಪೊಲೀಸ್ ಠಾಣೆಗೆ ಸೇರಿದ ಶಾಂತಿ ನಗರ 8ನೇ ಕ್ರಾಸ್ ಬಳಿ ಮನೆ ಸಂಖ್ಯೆ 244 ರ (ಮಹಮ್ಮದ್ ಅಮೀನ್ ರವರ ವಾಸದ ಮನೆ) ಮುಂಭಾಗ ಮತ್ತು ದಿನಾಂಕ 06.03.2023 ರಂದು ನ್ಯಾಯಾಲಯದ ಆವರಣದಲ್ಲಿ ಉದ್ಘೋಷಣೆಯ ವಾರೆಂಟ್‌ಗಳನ್ನು ಜಾರಿ ಮಾಡಿರುತ್ತೇನೆ.

ಆನಂತರ ಅಲ್ಲಿ ಪಂಚನಾಮಗಳನ್ನು ಜರುಗಿಸಲಾಯಿತು. ಅವುಗಳನ್ನು ಮತ್ತು ಅವುಗಳಲ್ಲಿರುವ ನನ್ನ ಸಹಿಗಳನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ–3, 4, 3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು.

ನಂತರ ಆ ಕುರಿತು ವರದಿಯನ್ನು ನನ್ನ ಮೇಲಾಧಿಕಾರಿಗಳ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

(ತೆ ನ್ಯಾದಲ್ಲಿ ಬೆರಳಚ್ಚುಗೊಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**
**ತಿ.ನರಸೀಪುರ**

**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ.**

**ಸಿಸಿ ಸಂಖ್ಯೆ 2086/2022**

ಚಾಸಾ-15, ಪ್ರಾ.ಸಾ-4

| | | |
|---|---|---|
| ಹೆಸರು | : | ಎಸ್.ಪಿ. ಸುರೇಶನ್ |
| ತಂದೆಯ ಹೆಸರು | : | ಎಸ್. ಪಿ. ಪುಟ್ಟೇಗೌಡ |
| ವಯಸ್ಸು | : | 68 |
| ವೃತ್ತಿ | : | ನಿವೃತ್ತ ಪೊಲೀಸ್ ಉಪ ನಿರೀಕ್ಷಕರು, |
| ವಾಸ | : | ನಂಜನಗೂಡು |

**ದಿನಾಂಕ 13.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ದಂಡ ಪ್ರಕ್ರಿಯೆ ಸಂಹಿತೆ ಕಲಂ 299 ರ ಅಡಿಯಲ್ಲಿ ಸಾಕ್ಷಿಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ದಿನಾಂಕ 28.07.2016 ರಿಂದ 31.05.2018 ರವರೆಗೆ ನಾನು ತಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 10.12.2016 ರಂದು ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗೆ ಪಡೆದು, ದಾಖಲೆಗಳನ್ನು ಪರಿಶೀಲಿಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

(ತೆ ನ್ಯಾದಲ್ಲಿ ಬೆರಳಚ್ಚುಗೊಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,**
**ತಿ.ನರಸೀಪುರ**